**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ    2046/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ನವೀನ್ ಕುಮಾರ್ ಎಂ ಜಿ | **ಚಾ.ಸಾ.-1** |
| **ತಂದೆ ಹೆಸರು** | - | ಗುರುಮೂರ್ತಿ | **ಫ್ರಾ.ಸಾ.-1** |
| **ವಯಸ್ಸು** | - | 33 ವರ್ಷ | |
| **ಉದ್ಯೋಗ** | - | ಪಿ ಎಸ್ ಐ, ಶ್ರವಣಬೆಳಗೊಳ | |
| **ವಾಸಸ್ಥಳಃ** | - | ಶ್ರವಣಬೆಳಗೊಳ | |

ದಿನಾಂಕಃ 08.01.2026  ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು 04.08.2022 ರಿಂದ 08.08.2023 ರವರೆಗೆ  ಕೆಸ್ತೂರು ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 24.07.2022 ರಂದು ಸಂಜೆ 06.10 ಗಂಟೆ ಸಮಯದಲ್ಲಿ ಮಾಚನಹಳ್ಳಿ ಬಳಿ ಗಲಾಟೆಯಾಗಿರುವ ಬಗ್ಗೆ ಬಂದ ಮಾಹಿತಿಯ ಮೇರೆಗೆ, ಮಾಚನಹಳ್ಳಿಗೆ ನಾವು ಹೋಗಿದ್ದು, ನಂತರ ಸ್ಥಳದಲ್ಲಿ ಸ್ವಿಫ್ಟ್ ಡಿಸ್ಟೈರ್  ಕೆಎ-11 ಬಿ-2792 ರ ಕಾರಿನಲ್ಲಿ ನಾಲ್ಕು ಜನ, ಗಲಾಟೆ ಮಾಡುತ್ತಿದ್ದು, ಸದರೀ 4 ಜನದ ಪೈಕಿ ಇಬ್ಬರು ವ್ಯಕ್ತಿಗಳು ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡಚಣೆ ಉಂಟು ಮಾಡಿದ್ದು, ಸದರೀ ಕಾರಿನ ಚಾಲಕನನ್ನು ಸ್ಥಳದಿಂದ ಠಾಣೆಗೆ ಕರೆದುಕೊಂಡು ಬಂದಿದ್ದು, ಆಗ ಸದರೀ ಚಾಲಕ ಮಧ್ಯಪಾನ ಮಾಡಿರುತ್ತಾನೆಂದು,  ಸಂಜೆ 07.29 ರ ಸಮಯದಲ್ಲಿ ಬ್ರೆತ್ ಅನಲೈಸರ್ ನಿಂದ ಪರಿಶೀಲಿಸಿದಾಗ, ಸದರೀ ಬ್ರೆತ್ ಅನಲೈಸರ್ ಉಪಕರಣದಲ್ಲಿ ಸದರೀ ಕಾರಿನ ಚಾಲಕ, ಮಧ್ಯಪಾನವನ್ನು ಮಾಡಿರುವ ಬಗ್ಗೆ ದೃಢಪಟ್ಟಿರುತ್ತದೆ.  ಆದ ಕಾರಣ ಸದರೀ ಚಾಲಕನಾದ ಮಂಜುಕುಮಾರ್ ಎಂಬುವವರ ವಿರುದ್ಧ  ಕಲಂ 185 ಐ ಎಂ ವಿ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿ ದೋಷಾರೋಪಣೆ ಪಟ್ಟಿಯನ್ನು ಮತ್ತು ಬ್ರೆತ್ ಅನಲೈಸೇಷರ್ ನ ಚಲನ್ ನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರೀ ಚಲನ್ ಮತ್ತು ನೋಟೀಸ್ ನ್ನು, ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಮತ್ತು 2 ಎಂದು ಗುರುತಿಸಲಾಯಿತು. ಚಲನ್ ಮತ್ತು ನೋಟೀಸ್ ನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯೇ ಆ ದಿನ ಮಧ್ಯಪಾನ ಮಾಡಿ ಕೆಎ-11 ಬಿ-2792 ರ ಕಾರಿನ್ನು ಚಲಾಯಿಸಿರುವ ವ್ಯಕ್ತಿಯಾಗಿರುತ್ತಾನೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ಎನ್ ಎಲ್ ಡಿ ರವರಿಂದ</u>**

ನಾನು ಆರೋಪಿಯನ್ನು ನೋಡಿದಾಗ ಮೇಲೆ ಹೇಳಿದ ಕಾರು ಚಾಲನೆಯಲ್ಲಿತ್ತು. ಸದರೀ ಕಾರು ಚಾಲನೆಯಲ್ಲಿದ್ದುದನ್ನು ನಾನು ನೋಡಿರುತ್ತೇನೆ. ಆರೋಪಿಯು ಚಲಾಯಿಸುತ್ತಿದ್ದ ಕಾರನ್ನು ಹೊರತುಪಡಿಸಿ ಸದರೀ ಸಂದರ್ಭದಲ್ಲಿ ಬೇರೆ ಯಾವುದೇ ವಾಹನಗಳು ಬಂದಿರಲಿಲ್ಲ. ಆರೋಪಿ ಮತ್ತು ಇತರರ ವಿರುದ್ಧ ಈ ಪ್ರಕರಣವನ್ನು ಹೊರತುಪಡಿಸಿ, ಬೇರೆ ಎರಡು ಪ್ರಕರಣಗಳನ್ನು ಕೆಸ್ತೂರು ಪೋಲೀಸ್ ಠಾಣೆಯಲ್ಲಿ ದಾಖಲು ಮಾಡಲಾಗಿದೆ. ಸಾಕ್ಷಿ ಮುಂದುವರೆದ ಸದರೀ ಪ್ರಕರಣಗಳು ಬೇರೆ ಅಪರಾಧದ ಪ್ರಕರಣಗಳಾಗಿರುತ್ತವೆಯೆಂದು ನುಡಿಯುತ್ತಾರೆ. ದಿನಾಂಕಃ 24.07.2022 ರ ಸಂಜೆ 06.10 ರ ಸಮಯದಲ್ಲಿ ಆರೋಪಿ ಮತ್ತು ಇತರರ ವಿರುದ್ಧ ಬೇರೆ ಎರಡು ಅಪರಾಧಗಳಿಗೆ ಸಂಬಂಧಪಟ್ಟಂತೆ ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆಯೆಂದರೆ ಸರಿಯಲ್ಲ. ಕ್ರೈಂ ನಂ 87/2022 ರಂತೆ ಆರೋಪಿ ಮತ್ತು ಇತರರ ವಿರುದ್ಧ ನಾನೇ ದೂರುದಾರನಾಗಿ ಪ್ರಕರಣವನ್ನು ದಾಖಲು ಮಾಡಿರುತ್ತೇನೆಂದರೆ ಸರಿ. ಆರೋಪಿತರು ಗಲಾಟೆ ಮಾಡುತ್ತಿದ್ದಾರೆಂದು, ನನಗೆ 6.00 ಗಂಟೆಗೆ ಮಾಹಿತಿ ಬಂದಿರುತ್ತದೆ. ಹಾಗೂ ಕ್ರೈಂ ನಂ 86/2022 ಕ್ಕೆ ಸಂಜೆ 06.05 ಗಂಟೆಗೆ ಗಲಾಟೆಯ ಬಗ್ಗೆ ಮಾಹಿತಿ ಬಂದಿರುತ್ತದೆಯೆಂದು ಠಾಣೆಯಲ್ಲಿ ನಮೂದು ಮಾಡಲಾಗಿರುತ್ತದೆಯೆಂದರೆ ಸರಿ. ದಿನಾಂಕಃ 24.07.2022 ರಂದು ಸಂಜೆ 06.10 ಗಂಟೆಗೆ ಆರೋಪಿತರು ಮತ್ತು ಇತರರು ಮಾಚಹಳ್ಳಿ ಗೇಟ್ ಬಳಿ ಗಲಾಟೆ ಮಾಡುತ್ತಿರುತ್ತಾರೆಂದು ಠಾಣಾ ಪುಸ್ತಕದಲ್ಲಿ ನೋಂದಣಿ ಮಾಡಿಕೊಳ್ಳಲಾಗಿರುತ್ತದೆಯೆಂದರೆ ಸರಿ. ನಾವು ಘಟನಾ ಸ್ಥಳಕ್ಕೆ ಹೋದಾಗ ಸಂಜೆ 06.15 ಗಂಟೆಯಾಗಿರುತ್ತದೆ. ಸ್ಥಳಕ್ಕೆ ಹೋದ ನಂತರ ಆರೋಪಿತರು ನಮ್ಮ ಜೊತೆ ಅಸಭ್ಯವಾಗಿ ವರ್ತಿಸಿರುತ್ತಾರೆಂದು ಹೇಳಿರುತ್ತೇನೆಂದರೆ ಸರಿ. ಸಿ ಆರ್ 86, 87 ರ ಗಲಾಟೆ ಯಾವ ಸಮಯದಲ್ಲಿ ಆಗಿರುತ್ತದೆಯೆಂದರೆ ಸಾಕ್ಷಿಯು, ಸಂಜೆ 5.55 ಗಂಟೆ ಮತ್ತು

06.15 ರಿಂದ 06.20 ರ ಸಮಯದಲ್ಲಿ ಆಗಿರುತ್ತದೆ. ಕ್ರೈಂ ನಂ 86 ಕ್ಕೆ ಸಂಬಂಧಪಟ್ಟಂತೆ ಮಾದೇವನಹಳ್ಳಿ ಹಾಗೂ ಕ್ರೈಂ ನಂ 87 ಕ್ಕೆ ಸಂಬಂದಪಟ್ಟಂತೆ ಮಾಚನಹಳ್ಳಿಯಲ್ಲಿ ಗಲಾಟೆ ಆಗಿರುತ್ತದೆ. ಆರೋಪಿಯ ವಿರುದ್ದ ಸಲ್ಲಿಸಿರುವ ದೋಷಾರೋಪಣೆ ಪಟ್ಟಿಯಲ್ಲಿ ಯಾವ ಸಿಬ್ಬಂದಿಯ ಜೊತೆ ಅಸಭ್ಯವಾಗಿ ವರ್ತಿಸಿದ್ದರು ಎಂದು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿಯ ಬ್ರೆತ್ ಅನಲೈಸರ್ ನ್ನು ಸ್ಥಳದಲ್ಲಿ ಮಾಡಿರುವುದಿಲ್ಲ. ಆರೋಪಿಯನ್ನು ಅದೇ ದಿನ ಬೇರೆ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಆ ಸಮಯದಲ್ಲಿ ಆರೋಪಿಯನ್ನು ಹಾಜರುಪಡಿಸಲು ದೈಹಿಕವಾಗಿ ಸೂಕ್ತನಾಗಿದ್ದಾನೆಯೇ ಎಂಬ ವಿಚಾರವನ್ನು ಮೆಡಿಕಲ್ ತಪಾಸಣೆ ಮಾಡಿಸಲಾಗಿರುತ್ತದೆ, ಆದರೆ ಆರೋಪಿಯು ಮಧ್ಯಪಾನವನ್ನು ಮಾಡಿರುವ ಬಗ್ಗೆ ಸದರೀ ಕ್ರೈಂ ನಂಬರ್ ನಲ್ಲಿ ಸೂಕ್ತ ಮೆಡಿಕಲ್ ತಪಾಸಣೆಯನ್ನು ಮಾಡಿಸಿರುವುದಿಲ್ಲ. ಆರೋಪಿಯು ಆ ದಿನ ಯಾವುದೇ ಮಧ್ಯಪಾನವನ್ನು ಮಾಡಿ ಚಾಲನೆ ಮಾಡದೇ ಇದ್ದರೂ ಸಹ ಆರೋಪಿಯವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.